# ಕನ್ನಡ ವಿಶ್ವವಿದ್ಯಾಲಯ,ಹಂಪಿ

## ವಿದ್ಯಾರಣ್ಯ-೫೮೩ ೨೭೬

## ಮೇ ೩೦, ೨೦೧೮ರ ಬುಧವಾರದಂದು ನಡೆದ ಕಾರ್ಯಕಾರಿ ಸಮಿತಿ ೧೯೪ನೇ ಸಭೆಯ ನಡವಳಿಗಳು

ಸಭೆಯಲ್ಲಿ ಉಪಸ್ಥಿತರಿದ್ದವರು:

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಶ್ರೀ ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ | : ಸದಸ್ಯರು |
| ೦೩. ಪ್ರೊ. ಎ.ವಿ. ನಾವಡ, ಮಂಗಳೂರು | : ಸದಸ್ಯರು |
| ೦೪. ಡಾ. ವೀರಣ್ಣ ರಾಜೂರ, ಧಾರವಾಡ | : ಸದಸ್ಯರು |
| ೦೫. ಪ್ರೊ. ಸಿದ್ಧಲಿಂಗಯ್ಯ, ಬೆಂಗಳೂರು | : ಸದಸ್ಯರು |
| ೦೬. ಡಾ. ಓ. ಓಬಯ್ಯ, ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | : ಸದಸ್ಯರು |
| ೦೭. ಶ್ರೀಮತಿ ಮಹಾದೇವಿ ಗೋಕಾಕ್, ವಿಜಯಪುರ | : ಸದಸ್ಯರು |
| ೦೮. ಶ್ರೀ ಸರಜೂ ಕಾಟ್ಕರ್, ಬೆಳಗಾವಿ | : ಸದಸ್ಯರು |
| ೦೯. ಡಾ. ಕೆ. ಷರಿಫಾ, ಬೆಂಗಳೂರು | : ಸದಸ್ಯರು |
| ೧೦. ಡಾ. ಎ. ಸುಬ್ಬಣ್ಣ ರೈ, ಡೀನ್, ಭಾಷಾ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೧. ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೨. ಡಾ. ಸಿ.ಮಹಾದೇವ, ಡೀನ್, ವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೩. ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. | : ವಿಶೇಷ ಆಹ್ವಾನಿತರು |
| ೧೪. ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕ.ವಿ.ಹಂ. | : ಪದನಿಮಿತ್ತ ಕಾರ್ಯದರ್ಶಿ |

ಸಭೆಯಲ್ಲಿ ಅನುಪಸ್ಥಿತರಿದ್ದವರು:

| | |
|---|---|
| ೦೧. ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೫. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೬. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ವಿಷಯ : ದಿನಾಂಕ ೨೭.೦೩.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೩ನೇ ಸಭೆಯ ನಡವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

ನಿರ್ಣಯ : ದಿನಾಂಕ ೨೭.೦೩.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೩ನೇ ಸಭೆಯ ನಡವಳಿಗಳನ್ನು ಪರಿಶೀಲಿಸಿ ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

ವಿಷಯ : ದಿನಾಂಕ ೨೭.೦೩.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೩ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.(ಅನುಬಂಧ-೦೨)

ನಿರ್ಣಯ : ದಿನಾಂಕ ೨೭.೦೩.೨೦೧೮ರಂದು ನಡೆದ ಕಾರ್ಯಕಾರಿ ಸಮಿತಿಯ ೧೯೩ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡಿತು.

೧೯೪. ೦೧. ಕನ್ನಡ ವಿಶ್ವವಿದ್ಯಾಲಯದ ದೇಸಿ ಸಂಸ್ಕೃತಿ ಅಧ್ಯಯನ ಕೇಂದ್ರ, ಕುರುಬನಕಟ್ಟೆ ವಿಸ್ತರಣಾ ಕೇಂದ್ರದ ಅಭಿವೃದ್ಧಿ ಕುರಿತು ಚರ್ಚೆ.

ನಿರ್ಣಯ : ಈ ಭಾಗದ ಎಂ.ಎಲ್.ಎ ಅವರ ಮೂಲಕ ರಸ್ತೆಗೆ ಸಮೀಪದಲ್ಲಿರುವ ಜಾಗೆಯೊಂದನ್ನು ಗುರುತಿಸಿ ಸರ್ಕಾರದ ಮೂಲಕ ವಿಶ್ವವಿದ್ಯಾಲಯಕ್ಕೆ ಪಡೆದು ಅಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ನಿರ್ಣಯಿಸಲಾಯಿತು.

ಡಾ. ಕೇಶವನ್ ಪ್ರಸಾದ್ ಅವರಿಗೆ ಜಾಗೆಗೆ ಸಮ್ಮಂದಿಸಿದ ಕಾರ್ಯಗಳನ್ನು ಮಾಡಲು ಸೂಚಿಸಲಾಯಿತು. ಕೇಂದ್ರದ ಶೈಕ್ಷಣಿಕ ಅಭಿವೃದ್ಧಿಗಾಗಿ ಡಾ. ವೆಂಕಟೇಶ ಇಂದ್ವಾಡಿ ಅವರನ್ನು, ಅವರ ಕೋರಿಕೆಯನ್ನು ಪರಿಗಣಿಸಿ ವರ್ಗಾವಣೆಮಾಡಲು ನಿರ್ಣಯಿಸಲಾಯಿತು. ಈ ಭಾಗದ ಸಂಪನ್ಮೂಲ ವ್ಯಕ್ತಿಗಳು ಕೇಂದ್ರದೊಂದಿಗೆ ಸಂಪರ್ಕದಲ್ಲಿ ಇರುವಂತೆ ನೋಡಿಕೊಳ್ಳಲು ಡಾ. ಕೇಶವನ್ ಪ್ರಸಾದ್ ಅವರಿಗೆ ಸೂಚಿಸಲಾಯಿತು.

೧೯೪. ೦೨. ಡಾ. ಚಲುವರಾಜು, ಪ್ರಾಧ್ಯಾಪಕರು ಇವರನ್ನು ಮೈಸೂರಿನ ಕರ್ನಾಟಕ ಬುಡಕಟ್ಟು ಸಂಶೋಧನಾ ಕೇಂದ್ರಕ್ಕೆ ನಿರ್ದೇಶಕರಾಗಿ ನಿಯೋಜಿಸುವ ಬಗ್ಗೆ.

ನಿರ್ಣಯ : ಸದರಿಯವರ ಮನವಿಯನ್ನು ಸಭೆಯು ಪರಿಶೀಲಿಸಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರ ಕೊರತೆ ಇದೆ. ಹಾಗೂ ಈಗಾಗಲೇ ಒಬ್ಬ ಪ್ರಾಧ್ಯಾಪಕರು ಸಬಾಟಿಕಲ್ ರಜೆಯಲ್ಲಿರುವುದರಿಂದ ಪ್ರತಿನಿಯೋಜನೆ ಕೋರಿಕೆಯನ್ನು ಕೈಬಿಡಲು ಮತ್ತು ಸದರಿಯವರು ವಿಶ್ವವಿದ್ಯಾಲಯದಲ್ಲೇ ಇದ್ದು ಕಾರ್ಯನಿರ್ವಹಿಸಲು ಸಭೆ ತೀರ್ಮಾನಿಸಿತು.

೧೯೪. ೦೩. ಪಿ.ಎಸ್. ಕರುಣಾಕರ, ಕಿರಿಯ ಸಹಾಯಕ ಇವರು ಬೆಂಗಳೂರು ಕಚೇರಿಗೆ ತಾತ್ಕಾಲಿಕ ವರ್ಗಾವಣೆ ಮಾಡಲು ಕೋರಿ ಸಲ್ಲಿಸಿರುವ ಮನವಿ ಪತ್ರ.

ನಿರ್ಣಯ : ಸದರಿಯವರ ಮನವಿಯನ್ನು ಸಭೆಯು ಪರಿಶೀಲಿಸಿ ಪತ್ನಿಯ ಅನಾರೋಗ್ಯದ ನಿಮಿತ್ತ ಮಾನವೀಯ ದೃಷ್ಟಿಯಿಂದ ಶರತ್ತುಬದ್ಧವಾಗಿ ಮೂರು ತಿಂಗಳ ಅವಧಿಗೆ ಮಾತ್ರ ನಿಯೋಜನೆ ಮಾಡಲು ಸಭೆ ತೀರ್ಮಾನಿಸಿತು.

೧೯೪. ೦೪. ಪ್ರಸಾರಾಂಗದ ಪುಸ್ತಕಗಳ ರವಾನೆ ಕುರಿತು.

ನಿರ್ಣಯ : ಈ ಕುರಿತಂತೆ ಸಭೆಯು ಪರಿಶೀಲಿಸಿ ಪ್ರಸಾರಾಂಗದ ಪುಸ್ತಕಗಳನ್ನು ಪೋಸ್ಟ್ ಅಥವಾ ಕೋರಿಯರ್ ಮಾಡದೆ ಕಾರ್ಯಕಾರಿ/ ಆಡಳಿತ ಮಂಡಳಿ ಸದಸ್ಯರು ಹಾಗೂ ಅಥಿತಿಗಳು ವಿಶ್ವವಿದ್ಯಾಲಯದ ಆವರಣಕ್ಕೆ ಹಾಗೂ ಸಭೆ/ಸಮಾರಂಭಗಳಿಗೆ ಆಗಮಿಸಿದಾಗ ಖುದ್ದಾಗಿ ಅವರ ಮೂಲಕ ಕಳುಹಿಸಲು ಸಭೆ ತೀರ್ಮಾನಿಸಿತು.

೧೯೪. ೦೫. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ: ೨೩೬೮/೨೦೧೧ರ ತೀರ್ಪಿನನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ವಿವಿಧ ವೃಂದಗಳ ಹಿಂಬಡ್ತಿ ಮತ್ತು ಮುಂಬಡ್ತಿಯನ್ನು ಸಂಖ್ಯೆ: ಇಡಿ ೪೭ ವಿವಿಧ ೨೦೧೭ ದಿನಾಂಕ ೦೪.೦೪.೨೦೧೮ರ ಅನ್ವಯ ಪಾಲಿಸಲು ಸಮಿತಿ ರಚಿಸಿ ಸೇವಾ ದಾಖಲೆಗಳನ್ನು ಪರಿಶೀಲಿಸಿ ಒಟ್ಟು ೦೬ ಜನ ಸಿಬ್ಬಂದಿಗಳಿಗೆ ಹಿಂಬಡ್ತಿ/ ಮುಂಬಡ್ತಿ ಆದೇಶ ನೀಡಲಾಗಿದೆ. ಈ ಸಿಬ್ಬಂದಿಗಳಲ್ಲಿ ಕೆಲವರು ಸೇವಾ ಜೇಷ್ಠತೆಯನ್ನು ಪ್ರಶ್ನಿಸಿ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ಈ ಆಕ್ಷೇಪಣೆಗಳಲ್ಲಿ ವಿಶ್ವವಿದ್ಯಾಲಯದ ಆಡಳಿತಾಧಿಕಾರಿಗಳು ಸಮಿತಿಯಲ್ಲಿ ಇರುವ ಬಗ್ಗೆ ತಕರಾರುಗಳನ್ನು ಸಲ್ಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸದರಿ ಆಕ್ಷೇಪಣೆಗಳ ಪರಿಶೀಲನೆಗೆ ಹಾಗೂ ಇತರ ಸೇವಾ ಸಮಸ್ಯೆಗಳ ಪರಿಹಾರಕ್ಕಾಗಿ ತಜ್ಞರ ಸಮಿತಿಯನ್ನು ರಚಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸಭೆಯು ಈ ಕುರಿತಂತೆ ಪರಿಶೀಲಿಸಿ ಇವುಗಳ ಕಾರ್ಯನಿರ್ವಹಣೆಗೆ ಒಬ್ಬ ಅಧಿಕಾರಿಯನ್ನು ನಿಯೋಜಿಸಲು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ತಜ್ಞರು, ಶಿಕ್ಷಣ ಇಲಾಖೆಯಲ್ಲಿ ಸೇವಾ ವಿಷಯಗಳಲ್ಲಿ ಪರಿಣಿತರಾಗಿರುವವರನ್ನು ಹಾಗೂ ಡಾ. ಓ. ಓಬಯ್ಯ, ಕಾರ್ಯಕಾರಿ ಸಮಿತಿ ಸದಸ್ಯರು ಇವರನ್ನೊಳಗೊಂಡ ಸೇವಾ ಜೇಷ್ಠತೆ ಸಮಿತಿಯನ್ನು ರಚಿಸಲು ಸಭೆ ಅನುಮೋದನೆ ನೀಡಿತು.

೧೯೪. ೦೬. ಹಣಕಾಸು ಸಲಹಾ ಸಮಿತಿ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೨೮.೦೫.೨೦೧೮ರಂದು ನಡೆದ ೨೦೧೭-೧೮ನೇ ಸಾಲಿನ ೪ನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆಯ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು. ಹಾಗೂ ಪ್ರೊ. ಅಶೋಕ ಕುಮಾರ ರಂಜೆರೆ ಅವರನ್ನು ಹಣಕಾಸು ಸಮಿತಿ ಸದಸ್ಯರನ್ನಾಗಿ ನಿಯೋಜಿಸಿರುವುದಕ್ಕೆ ಸಭೆ ಅನುಮೋದನೆ ನೀಡಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

೧೯೪. ೦೭. ಡಾ. ಮಾಧವ ಪೆರಾಜೆ, ಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ ಇವರು ರನ್ನನ ಅಜಿತನಾಥ ತೀರ್ಥಂಕರ ಪುರಾಣಂ (ದೀಪಿಕೆ) ಯೋಜನೆ ಪ್ರಸ್ತಾವ ಸಲ್ಲಿಸಿ ಒಂದು ವರ್ಷಗಳ ಅವಧಿಗೆ ಸಬಾಟಿಕಲ್ ರಜೆ ಕೋರಿ ಮನವಿ ಸಲ್ಲಿಸಿದ್ದಾರೆ. ಸಬಾಟಿಕಲ್ ರಜೆ ಮಂಜೂರಾತಿಗೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

ನಿರ್ಣಯ : ಈ ಕುರಿತಂತೆ ಸಭೆಯು ಪರಿಶೀಲಿಸಿ ತಾತ್ವಿಕವಾಗಿ ಒಪ್ಪಿಗೆ ನೀಡಿತು. ಮತ್ತು ಕುಲಪತಿಯವರು ನಿರ್ಣಯ ಕೈಗೊಳ್ಳಲು ಸಭೆ ಸೂಚಿಸಿತು.

೧೯೪. ೦೮. ಕಾರ್ಯಕಾರಿ ಸಮಿತಿ ೧೯೧.೧೯ರ ನಿರ್ಣಯದಂತೆ ಶ್ರೀ ಅಬ್ದುಲ್ ಹಕೀಂ ಅವರಿಗೆ ಕನ್ನಡ ವಿಶ್ವವಿದ್ಯಾಲಯವು ನೀಡಿರುವ ಎಂ.ಎ. ಪದವಿ (ಸ್ನಾತಕೋತ್ತರ ಪತ್ರಿಕೋದ್ಯಮ)ಯನ್ನು ಕಾನೂನಿನನ್ವಯ ಹಿಂಪಡೆಯುವ ಕುರಿತು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ನಿರ್ಣಯದಂತೆ ದಿನಾಂಕ ೧೯.೦೩.೨೦೧೮ರಂದು ಶ್ರೀ ಅಬ್ದುಲ್ ಹಕೀಂ ಅವರಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿತ್ತು. ಈ ನೋಟೀಸಿಗೆ ಸದರಿಯವರು ದಿನಾಂಕ ೨೭.೦೩.೨೦೧೮ ರಂದು ಪತ್ರ ಬರೆದು ರಾಜ್ಯ ವಿಧಾನಸಭೆಯ ಚುನಾವಣೆ ಹಿನ್ನೆಲೆಯಲ್ಲಿ ದಿನಾಂಕ ೨೭.೦೩.೨೦೧೮ ರಿಂದ ನೀತಿಸಂಹಿತೆ ಜಾರಿಯಲ್ಲಿರುವ ಕಾರಣ ಈ ಪ್ರಕರಣವನ್ನು ಮುಂದೂಡಿ, ನೀತಿಸಂಹಿತೆ ಮುಗಿದ ನಂತರ ದಿನಗಳಲ್ಲಿ ಹಾಜರಾಗಿ ವಿವರಣೆ ನೀಡುವಂತೆ ಕಾರಣ ಕೇಳಿ ನೋಟೀಸ್ ನೀಡಬೇಕಾಗಿ ವಿನಂತಿಸಿಕೊಂಡಿದ್ದಾರೆ. ಈ ವಿಷಯವನ್ನು ಕಾರ್ಯಕಾರಿ ಸಮಿತಿ ಸಭೆಯ ಅವಗಾಹನೆಗಾಗಿ ಹಾಗೂ ನಿರ್ದೇಶನ ಕೋರಿದೆ.

ನಿರ್ಣಯ : ಈ ಕುರಿತು ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆದು ಇನ್ನೊಮ್ಮೆ ನೋಟೀಸ್ ನೀಡಲು ಸಭೆ ತೀರ್ಮಾನಿಸಿತು.

೧೯೪. ೦೯. ಕಾರ್ಯಕಾರಿ ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾದ ಅಧ್ಯಯನಾಂಗದ ಪ್ರಸ್ತಾವಗಳು.

೧. ಬೆಳಗಾವಿಯ ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ವಿಸ್ತರಣಾ ಕೇಂದ್ರ ಸ್ಥಾಪಿಸಲು ಹಾಗೂ ಉದ್ದೇಶಿತ ವಿಸ್ತರಣಾ ಕೇಂದ್ರದಲ್ಲಿ ನಡೆಸಬಹುದಾದ ಶೈಕ್ಷಣಿಕ ಕಾರ್ಯಕ್ರಮ/ಕೋರ್ಸ್‌ಗಳಿಗೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

೨. ಅಧ್ಯಯನಾಂಗದ ಮೂಲಕ ನಡೆಯುತ್ತಿರುವ ವಿವಿಧ ಕೋರ್ಸ್‌ಗಳ ೨೦೧೮-೧೯ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿಗೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

೩. ೨೦೧೮-೧೯ನೇ ಸಾಲಿನಿಂದ ಮಾನ್ಯತಾ ಕೇಂದ್ರಗಳು ಹಾಗೂ ವಿಸ್ತರಣಾ ಕೇಂದ್ರಗಳ ಶೈಕ್ಷಣಿಕ ಮಂಡಳಿ ಅಧ್ಯಕ್ಷರ ನೇಮಕಾತಿಗೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

೪. ಪಿಎಚ್.ಡಿ ಅಧ್ಯಯನ ನಿಯಮಾವಳಿಯಲ್ಲಿರುವ ಅಂಶಗಳನ್ನು ಪರಿಷ್ಕರಿಸಿ ಮಾನ್ಯ ಕುಲಪತಿಯವರಿಂದ ಅಂತಿಮಗೊಳಿಸಿದ ಅಂಶಗಳ ನಿಯಮಾವಳಿಗೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

ನಿರ್ಣಯ : ಈ ಮೇಲಿನ ನಾಲ್ಕು ಅಂಶಗಳನ್ನು ಕುಲಂಕಶವಾಗಿ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೧೯೪. ೧೦. ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಪ್ರಸ್ತಾವಗಳು.

೧. ೨೦೧೭-೧೮ನೇ ಸಾಲಿನ ಚಿತ್ರಕಲಾ ವಿದ್ಯಾಲಯಗಳ ಪರೀಕ್ಷಾ ಕಾರ್ಯ ಹಾಗೂ ಮೌಲ್ಯಮಾಪನ ಕಾರ್ಯ ದಿನಾಂಕ ೨೫.೦೫.೨೦೧೮ ರಿಂದ ೨೯.೦೫.೨೦೧೮ಕ್ಕೆ ಮುಗಿಯಲಿದ್ದು, ದಿನಾಂಕ ೩೦.೦೫.೨೦೧೮ರಂದು ಫಲಿತಾಂಶ ಪ್ರಕಟಿಸಲು ಮೌಲ್ಯಮಾಪನ ಮತ್ತು ಫಲಿತಾಂಶ ಕಾರ್ಯಕ್ಕಾಗಿ ತಗಲುವ ಒಟ್ಟು ಮೊತ್ತ ರೂ. ೨೦ ಲಕ್ಷ (ಇಪ್ಪತ್ತು ಲಕ್ಷ ರೂ. )ಗಳಿಗೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

೨. ದಿನಾಂಕ ೨೩.೦೪.೨೦೧೮ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ಬಿ.ವಿ.ಎ ಪದವಿ ಪರೀಕ್ಷಾ ಮಂಡಳಿ ಸಭೆಯ (ಪರಿಷ್ಕೃತ) ನಡೆವಳಿಗೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

೩. ಕನ್ನಡ ವಿಶ್ವವಿದ್ಯಾಲಯದ ವಾಸ್ತುಶಿಲ್ಪ ಪ್ರತಿಮಾ ಶಾಸ್ತ್ರ ವಿಭಾಗ ಬದಾಮಿಯ ೨೦೧೮-೧೯ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿ ಅಧಿಸೂಚನೆಗೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.

ನಿರ್ಣಯ : ಈ ಕುರಿತಂತೆ ಸಭೆಯು ಪರಿಶೀಲಿಸಿ ಮೇಲಿನ ಮೂರು ವಿಷಯಗಳಿಗೆ ಅನುಮೋದನೆ ನೀಡಿತು.

೧೯೪. ೧೧. ದಿನಾಂಕ ೧೯.೦೨.೨೦೧೮ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾ ಸಮಿತಿ ೧೩ನೇ ಸಭೆಯ ನಡೆವಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೧೯.೦೨.೨೦೧೮ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ದೂರಶಿಕ್ಷಣ ನಿರ್ದೇಶನಾಲಯದ ಉನ್ನತ ಸಲಹಾ ಸಮಿತಿ ೧೩ನೇ ಸಭೆಯ ನಡೆವಳಿಗೆ ಸಭೆಯು ಅನುಮೋದನೆ ನೀಡಿತು.

೧೯೪. ೧೨. ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಕನ್ನಡ ವಿಶ್ವವಿದ್ಯಾಲಯವು ಕಲ್ಪಿಸಬಹುದಾದ ಸೌಲಭ್ಯಗಳ ನಿರ್ದೇಶನ ಕೋರಿ.

ನಿರ್ಣಯ : ಸರ್ಕಾರದ ನಿರ್ದೇಶನದಂತೆ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಕನ್ನಡ ವಿಶ್ವವಿದ್ಯಾಲಯವು ಈಗಾಗಲೇ ಶಿಕ್ಷಣ ಇಲಾಖೆಗೆ ಬರೆದಿರುವ ವಿಷಯಗಳನ್ನು ಜಾರಿಗೊಳಿಸಲು ಸಭೆ ಅನುಮತಿನೀಡಿತು.

೧೯೪. ೧೩. ದೃಶ್ಯಕಲಾ ವಿಭಾಗದ ತಾತ್ಕಾಲಿಕ ಅಧ್ಯಾಪಕರಾದ ಡಾ. ಶಿವಾನಂದ ಹೆಚ್. ಬಂಟನೂರ ಮತ್ತು ಡಾ. ಹೆಚ್.ಎಂ. ಕೃಷ್ಣೇಗೌಡ ಇವರು ದೈನಂದಿನ ಬದುಕಿನ ನಿರ್ವಹಣೆಯು ದುಬಾರಿಯಾಗುತ್ತಿರುವುದರಿಂದ ವೇತನವನ್ನು ಹೆಚ್ಚಿಸಬೇಕೆಂದು ಮನವಿ ಸಲ್ಲಿಸಿದ್ದಾರೆ. ಸದರಿಯವರ ವೇತನ ಹೆಚ್ಚಿಸುವ ಕುರಿತಂತೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಈ ಕುರಿತು ಸಭೆಯು ಪರಿಶೀಲಿಸಿ ಸಂಗೀತ ಮತ್ತು ದೃಶ್ಯಕಲಾ ವಿಭಾಗದ ಎಲ್ಲಾ ತಾತ್ಕಾಲಿಕ ಅಧ್ಯಾಪಕರಿಗೆ ಸರಿಯಾಗಿ ಕಾರ್ಯನಿರ್ವಹಿಸುವಂತೆ ಎಚ್ಚರಿಕೆ ನೀಡಲು ಸೂಚಿಸಿ ವೇತನ ಹೆಚ್ಚಳಕ್ಕೆ ಅನುಮೋದನೆ ನೀಡಿತು.

ಅ ಡಾ. ಶಿವಾನಂದ ಬಂಟನೂರು ಅವರಿಗೆ ಮಾಸಿಕ ರೂ.೩೦,೦೦೦/-ಗಳಿಂದ ರೂ.೩೫,೦೦೦/-ಗಳಿಗೆ ಹಾಗೂ ಹೆಚ್.ಎಂ. ಕೃಷ್ಣೇಗೌಡ ಇವರಿಗೆ ಮಾಸಿಕ ರೂ.೧೨,೦೦೦/-ಗಳಿಂದ ರೂ.೧೫,೦೦೦/-ಗಳಿಗೆ ಹೆಚ್ಚಿಸಲು ಸಭೆ ಅನುಮೋದನೆ ನೀಡಿತು.

ಆ. ಸಂಗೀತ ವಿಭಾಗದಲ್ಲಿ ಫುಲ್‌ಟೈಮ್ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಅಧ್ಯಾಪಕರು ಮತ್ತು ಸಾಥೀದಾರರಿಗೆ ಮಾಸಿಕ ವೇತನವನ್ನು ಶೇ.೧೦% ರಷ್ಟು ಹೆಚ್ಚಿಸಲು ಸಭೆ ಅನುಮೋದನೆ ನೀಡಿತು.

ಇ. ವಿದ್ಯಾರಣ್ಯ ಪೂರ್ವ ಪ್ರಾಥಮಿಕ ಶಾಲೆಗೆ ರೂ.೨೫,೦೦೦/- ಸಹಾಯದನವನ್ನು ನೀಡಲು ಸಭೆ ಅನುಮೋದನೆ ನೀಡಿತು.

೧೯೪. ೧೪. ಕನ್ನಡ ವಿಶ್ವವಿದ್ಯಾಲಯದಲ್ಲಿ ಕೆ.ಆರ್.ಐ.ಡಿ.ಎಲ್ ನಿರ್ವಹಿಸುತ್ತಿರುವ ಕಾಮಗಾರಿ ವಿಳಂಬ ಹಾಗೂ ತಾಂತ್ರಿಕ ವಿಭಾಗದ ಕಾರ್ಯನಿರ್ವಹಣೆಯ ವಿಧಾನದ ಬಗೆಗೆ.

ನಿರ್ಣಯ : ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಿರುವ ಕಾಮಗಾರಿಗಳು ಮುಗಿದಿರುವವು ಎಂದು ತಾಂತ್ರಿಕ ವಿಭಾಗದ ಮುಖ್ಯಸ್ಥರು ನೀಡಿರುವ ಶಿಫಾರಸ್ಸನ್ನು ಅನುಸರಿಸಿ ಆ ಕಾಮಗಾರಿಗಳ ಮೂಲ ಎಸ್ಟಿಮೇಟ್‌ಗಳನ್ನು ಇಟ್ಟುಕೊಂಡು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯೊಂದನ್ನು ಮಾಡಿ ಪರಿಶೀಲಿಸುವುದು. ಮುಗಿಸದ ಕಾಮಗಾರಿಗಳಿಗೆ ಸಮ್ಮಂದಿಸಿ ಸಂಸ್ಥೆಯ ಎಂ.ಡಿ ಅವರಿಗೆ ಪತ್ರ ಬರೆಯಲು ನಿರ್ಣಯಿಸಲಾಯಿತು. ಯಾವುದೇ ಸಿವಿಲ್ ಕೆಲಸಗಳ ಬಗೆಗೆ ಕುಲಪತಿಗಳು ಮೌಖಿಕವಾಗಿ ಹೇಳಿದ್ದನ್ನು ತಕ್ಷಣಕ್ಕೆ ಅಂದಾಜು ವೆಚ್ಚವನ್ನು ಸಿದ್ಧಪಡಿಸಿ ಅನುಮೋದನೆ ಪಡೆದು ಕಾಮಗಾರಿಯನ್ನು ಪ್ರಾರಂಭಿಸಲು ತಾಂತ್ರಿಕ ವಿಭಾಗದ ಇಂಜಿನಿಯರರಿಗೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಎಚ್ಚರಿಕೆ ನೀಡಲು ನಿರ್ಣಯಿಸಲಾಯಿತು.

ಹಾಗೂ ಈ ಹಿಂದಿನ ೧೭೪ನೇ ಕಾರ್ಯಕಾರಿ ಸಮಿತಿ ಸಭೆಯ ನಿರ್ಣಯ ಸಂಖ್ಯೆ ೧೭೪.೨೪ರಲ್ಲಿ ತಾಂತ್ರಿಕ ವಿಭಾಗದವರಿಗೆ ವಿಧಿಸಿರುವ ದಂಡವನ್ನು, ಜೂನ್ ೨೩, ೨೦೧೫ರಲ್ಲಿ ಕುಲಸಚಿವರು ನೀಡಿದ ಪತ್ರದಲ್ಲಿರುವಂತೆ ವಸೂಲು ಮಾಡಲು ಸಭೆ ಸೂಚಿಸಿತು.

೧೯೪. ೧೫. ಯು.ಜಿ.ಸಿ.ಯ SWAYAM ಅಡಿಯಲ್ಲಿ ಕೋರ್ಸ್‌ಗಳನ್ನು ಆರಂಭಿಸಲು ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ನೀಡುವ ಬಗೆಗೆ.

ನಿರ್ಣಯ : ಯು.ಜಿ.ಸಿ.ಯ SWAYAM ಅಡಿಯಲ್ಲಿ ಪುರಾತತ್ವ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಡಿಪ್ಲೊಮಾ ಆನ್‌ಲೈನ್ ಕೋರ್ಸ್ ಪ್ರಾರಂಭಿಸಲು ಸಭೆ ಅನುಮೋದನೆ ನೀಡಿತು.

೧೯೪. ೧೬. ಕನ್ನಡ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ೩೭೧ ಜೆ ಅಡಿಯಲ್ಲಿ ಮೀಸಲಿರುವ ಹುದ್ದೆಗಳಿಗಾಗಿ ೨೦೧೭-೧೮ನೇ ಸಾಲಿನಲ್ಲಿ ಜಾಹಿರಾತು ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಈ ಹುದ್ದೆಗಳಿಗೆ ವಿಶ್ವವಿದ್ಯಾಲಯದ ಸೂಕ್ತ ಪ್ರಾಧಿಕಾರಗಳ ಮೂಲಕ ಅನುಮೋದನೆ ಪಡೆದು ನೇಮಕಾತಿ ಆದೇಶಗಳನ್ನು ನೀಡಲಾಗಿತ್ತು. ಈ ಆದೇಶಗಳನ್ನು ಹಿಂಪಡೆದು ತಡೆಹಿಡಿಯಲು ಚುನಾವಣಾ ನೀತಿಸಂಹಿತೆ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾ ಅಧಿಕಾರಿಗಳು ಪತ್ರದ ಮೂಲಕ ಸೂಚಿಸಿದ್ದರು, ಅದರಂತೆ ಆದೇಶಗಳನ್ನು ಹಿಂಪಡೆದು ತಡೆಹಿಡಿಯಲಾಗಿತ್ತು. ನಂತರ ನೇಮಕಾತಿ ಹೊಂದಿದ ಅಭ್ಯರ್ಥಿಗಳು ಇದರ ವಿರುದ್ಧ ಧಾರವಾಡದ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ತಡೆಯಾಜ್ಞೆಯನ್ನು ತಂದಿದ್ದರು. ಉಚ್ಚ ನ್ಯಾಯಾಲಯದ ಆದೇಶದಂತೆ ಹಾಗೂ ವಿಶ್ವವಿದ್ಯಾಲಯವು ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆದು ಸದರಿಯವರಿಗೆ ಪುನಃ ಆದೇಶಗಳನ್ನು ನೀಡಲಾಯಿತು. ಈ ಕ್ರಮಗಳ ಕುರಿತು ಜಿಲ್ಲಾ ಚುನಾವಣಾ ಅಧಿಕಾರಿಗಳು ಆಕ್ಷೇಪಿಸಿದ ಅಂಶಗಳಿಗೆ ವಿವರವಾದ ಮಾಹಿತಿಯನ್ನು ವಿಶ್ವವಿದ್ಯಾಲಯದಿಂದ ನೀಡಲಾಯಿತು.

ಮೇಲೆ ತಿಳಿಸಿದಂತೆ ೨೦೧೭-೧೮ನೇ ಸಾಲಿನಲ್ಲಿ ೩೭೧ಜೆ ಅಡಿ ಖಾಲಿ ಇರುವ ಹುದ್ದೆಗಳ ಭರ್ತಿಯ ತರುವಾಯ ಉಳಿದ ಹುದ್ದೆಗಳಿಗೆ ಜಾಹಿರಾತು ನೀಡಿ ತುಂಬಲು ಅನುಮತಿ ಕೋರಿದೆ. (ಪಟ್ಟಿ ಲಗತ್ತಿಸಿದೆ)

ನಿರ್ಣಯ : ಎರಡೂ ವಿಷಯಗಳನ್ನು ಸಭೆಯು ಪರಿಶೀಲಿಸಿ ಈ ವಿಷಯಕ್ಕೆ ಸಂಬಂಧಿಸಿ ರಾಜ್ಯ ಉಚ್ಛನ್ಯಾಯಾಲಯದಲ್ಲಿರುವ ರಿಟ್ ಅರ್ಜಿಯನ್ನು ವಜಾಗೊಳಿಸಲು ವಿ.ವಿ. ಕ್ರಮವಹಿಸಲು ನಿರ್ಣಯಿಸಲಾಯಿತು ಹಾಗೂ ೨೦೧೭-೧೮ನೇ ಸಾಲಿನಲ್ಲಿ ೩೭೧ಜೆ ಅಡಿ ಖಾಲಿ ಇರುವ ಹುದ್ದೆಗಳ ಭರ್ತಿಯ ತರುವಾಯ ಉಳಿದ ಹುದ್ದೆಗಳಿಗೆ ವಿಸ್ತರಣಾ ಕೇಂದ್ರದ ಮತ್ತು ವಿಭಾಗಗಳ ವಿಷಯಗಳಲ್ಲಿ ಆಂತರಿಕ ಬದಲಾವಣೆ ಮಾಡಿಕೊಂಡು ಜಾಹಿರಾತು ನೀಡಿ ನೇಮಕಾತಿ ಪ್ರಕ್ರಿಯೆಗಳನ್ನು ಕೈಗೊಳ್ಳಲು ಸಭೆ ಅನುಮೋದನೆ ನೀಡಿತು.

೧೯೪. ೧೭. ಶ್ರೀ ಎಚ್.ಎಂ. ಸೋಮನಾಥ ಇವರ ಅಮಾನತು ಮತ್ತು ಇತರ ಪ್ರಕರಣಗಳ ಕುರಿತ ವಿಚಾರಣೆಗೆ ಸಂಬಂಧಿಸಿ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನೊಳಗೊಂಡ ಸಮಿತಿಯನ್ನು ರಚಿಸುವ ಕುರಿತು.

ನಿರ್ಣಯ : ಶ್ರೀ ಎಚ್.ಎಂ. ಸೋಮನಾಥ ಇವರ ಅಮಾನತು ಮತ್ತು ಇತರ ಪ್ರಕರಣಗಳ ಕುರಿತು ವಿಚಾರಣೆಗೆ ಸಂಬಂಧಿಸಿ ನಿವೃತ್ತ ಜಿಲ್ಲಾ ನ್ಯಾಯಾಧೀಶರ ಸಮಿತಿಯನ್ನು ರಚಿಸಲು ಮತ್ತು ವಿಷಯ ಮಂಡಿಸಲು ವಕೀಲರೊಬ್ಬರನ್ನು ನೇಮಿಸಲು ಕ್ರಮಕೈಗೊಳ್ಳಲು ಸಭೆ ಸೂಚಿಸಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು